**ದಿನಾಂಕಃ 28/03/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಪಿರ್ಯಾದುದಾರರ ಪರ ಶ್ರೀ ಕೆ ಬಿ ವಕೀಲರಿಂದಃ**

1. ನಾನು ದೊರೆಕೆರೆ ಗ್ರಾಮದಲ್ಲಿ ನನ್ನ ತಂದೆ ಕಾಲದಿಂದಲೂ ವಾಸಿರುತ್ತಿದ್ದೇನೆ. ದೊರೆಕೆರೆ ಗ್ರಾಮವನ್ನು ಹೊರತುಪಡಿಸಿ ಬೇರೆ ಗ್ರಾಮದಲ್ಲಿ ವಾಸಿಸುತ್ತಿಲ್ಲ. ದಾಸಯ್ಯನ ಮಗ ಕೃಷ್ಣ ಎಂದರೆ ನಾನೇ. ನಮ್ಮದು ದೊರೆಕೆರೆ ಗ್ರಾಮದ ಕಾಲೋನಿ ಬೀದಿ ಎಂದರೆ ಸರಿ. ಜನವರಿ 2018 ರಿಂದ ಫೆಬ್ರವರಿ 2018 ರವರೆಗೆ ನಾನು ಅಲ್ಲೇ ವಾಸಿಸುತ್ತಿದ್ದೆ ಎಂದರೆ ಸರಿ. ಅಲ್ಲಿನ ವಿದ್ಯಾಮಾನಗಳು ಗೊತ್ತು ಎಂದರೆ ಸರಿ.

2. ನಾನು ಪಿರಿಯಾಪಟ್ಟಣ ಶಾಖೆ, ವಿಜಯಾ ಬ್ಯಾಂಕ್ನಲ್ಲಿ ಖಾತೆ ಹೊಂದಿದ್ದೇನೆ ಎಂದರೆ ಸರಿಯಲ್ಲ. ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್, ಮಾಕೋಡು ಶಾಖೆ, ಪಿರಿಯಾಪಟ್ಟಣ ತಾಲ್ಲೂಕು ನಲ್ಲಿ ನನ್ನ ಖಾತೆ ಇದೆ. ವ್ಯವಹಾರದ ಉದ್ದೇಶದಿಂದ ಸದರಿ ಬ್ಯಾಂಕ್ನಲ್ಲಿ ನಾನು ಚೆಕ್ಕುಗಳನ್ನು ಪಡೆದಿದ್ದೆ ಎಂದರೆ ಸರಿ. ಎಲ್ಲಾ ವಿಚಾರಗಳನ್ನು ತಿಳಿದು ದಾಖಲೆಗಳಿಗೆ ಸಹಿ ಮಾಡುತ್ತೇನೆ ಎಂದರೆ ಸರಿ.

3. ನನಗೆ ಪಿರ್ಯಾದುದಾರರು ಪರಿಚಯ ಇಲ್ಲ. ಅವರು ನಿಲಂಗಾಲ ಗ್ರಾಮದವರು ಎಂದರೆ ನನಗೆ ಗೊತ್ತಿಲ್ಲ. ನಿಲಂಗಾಲ, ದೊರೆಕೆರೆ ಗ್ರಾಮಗಳು ಅಕ್ಕಪಕ್ಕದ ಗ್ರಾಮಗಳು ಎಂದರೆ ಸರಿ. ಅವು 3 ಕಿ ಮೀ ಅಂತರ ಇದೆ. ನನ್ನ ಕಾನೂನುಬದ್ಧ ಅವಶ್ಯಕತೆಗೋಸ್ಕರ ನಾನು ಪಿರ್ಯಾದುದಾರರಿಂದ ರೂ. 2 ಲಕ್ಷ ಹಣ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ಆ ಸಾಲವನ್ನು 4 ತಿಂಗಳಲ್ಲಿ ತೀರಿಸುತ್ತೇನೆಂದು ವಾಗ್ದಾನ ನೀಡಿದ್ದೆ ಎಂದರೆ ಸರಿಯಲ್ಲ. ಆ ವಾಗ್ದಾನದಂತೆ ದಿಃ 20.12.2017 ರಂದು ಪಿರ್ಯಾದುದಾರರು ನನ್ನ ಮನೆ ಬಳಿ ಬಂದು ಹಣ ವಾಪಸ್ಸು ನೀಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ಆಗ ನಾನು ಪಿರ್ಯಾದುದಾರರಿಗೆ ಕಾವೇರಿ ಕಲ್ಪತರು ಗ್ರಾಮಿಣ ಬ್ಯಾಂಕ್ ನ ಚೆಕ್ಕು ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ಪಿರ್ಯಾದುದಾರರು ತಮ್ಮ ವಿಜಯ ಬ್ಯಾಂಕ್ ಮುಖಾಂತರ ನನ್ನ ಬ್ಯಾಂಕ್ ಗೆ ನಗಧೀಕರಣಕ್ಕೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆಕ್ಕು ಸಾಕಷ್ಟು ಹಣ ಇಲ್ಲವೆಂದು ದಿಃ 02.01.2018 ರ ಹಿಂಬರಹದೊಂದಿಗೆ ಅಮಾನ್ಯ ಗೊಂಡಿತ್ತು ಎಂದರೆ ಸರಿಯಲ್ಲ. ದಿಃ 29.01.2018 ರಂದು ಪಿರ್ಯಾದುದಾರರು ನನ್ನ ಚೆಕ್ಕು ಅಮಾನ್ಯ ಗೊಂಡಿದೆ ಎಂದು ತಿಳುವಳಿಕೆ ಪತ್ರ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ತಿಳುವಳಿಕೆ ಪತ್ರವನ್ನು ನನಗೆ ತಲುಪಿಸಲು 7 ಬಾರಿ ಮನೆಯ ಬಳಿ ಬಂದಿದ್ದರೂ ಸಹ

ಅಂಚೆ ಅಧಿಕಾರಿಗಳೊಂದಿಗೆ ಶಾಮೀಲಾಗಿ ವಿಳಾಸದಾರರು 7 ದಿನಗಳಿಂದಲೂ ಸಿಗದಿದ್ದ ಕಾರಣ ಎಂದು ಸುಳ್ಳು ಷರಾ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಸಮಯದಲ್ಲಿ ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ನನ್ನ ಮಗನನ್ನು ಚಿಕಿತ್ಸೆಗೆಂದು ದಾಖಲಿಸಿದ್ದೆ. ಆಸ್ಪತ್ರೆಗೆ ದಾಖಲಿಸಿದ ದಿನಾಂಕ ಮರೆತಿದ್ದೆ. ನನ್ನ ಮಗನನ್ನು ಆಸ್ಪತ್ರೆಗೆ ದಾಖಲಿಸಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಮಗನನ್ನು ಆಸ್ಪತ್ರೆಗೆ ದಾಖಲಿಸದಿದ್ದರೂ ಸಹ ತಿಳುವಳಿಕೆ ಪತ್ರ ನನಗೆ ತಲುಪಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಪಿ-1 ಚೆಕ್ಕು ನನ್ನದು. ಅದರಲ್ಲಿರುವ ಸಹಿ ನನ್ನದಲ್ಲ. ಮುಚ್ಚಳಿಕೆಯಲ್ಲಿರುವ ಸಹಿ ನನ್ನದು. ವಕಾಲತ್ ನಲ್ಲಿರುವ ಸಹಿ ನನ್ನದೇ. ನನ್ನ ಸಹಿ ಮತ್ತು ನಾನು ಬ್ಯಾಂಕ್ ಗೆ ಸಲ್ಲಿಸಿದ ಸಹಿಗಳನ್ನು ಹೋಲಿಕೆ ಮಾಡಿ ಹಣ ನೀಡುತ್ತಾರೆ ಎಂದರೆ ಸರಿ. ನನ್ನ ಸಹಿಯನ್ನು ಹೋಲಿಕೆ ಮಾಡಿ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹ ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಂದ ರೂ. 2 ಲಕ್ಷ ಸಾಲ ತೀರಿಸಲು ನಿಪಿ-1 ಚೆಕ್ಕನ್ನು ನೀಡಿದ್ದರೂ ಸಹ ನೀಡಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನನ್ನ ಸಹಿ ಇದ್ದರೂ ಸಹ ನನ್ನ ಸಹಿ ಅಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಪಿರ್ಯಾದಿ ಹೂಡುವ ಮುನ್ನ ಮತ್ತು ಹೂಡಿದ ನಂತರ ಗೊತ್ತಿದ್ದರೂ ಸಹ ಏನು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

<u>**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**</u>
<u>**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**</u>

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**